



# ಕಲಾತ್ಮಕ ಪೇಪರ್ ಬಾಕ್ಸ್

ಪೇಪರ್‌ನಲ್ಲಿ ಕಲಾತ್ಮಕವಾಗಿ ಬಾಕ್ಸ್ ಮಾಡಬಹುದು. ಪ್ಲಾಸ್ಟಿಕ್ ಕವರ್ ಬಳಸುವ ಬದಲಿಗೆ ಈ ಕಲಾತ್ಮಕ ಪೇಪರ್ ಬಾಕ್ಸ್‌ಗಳನ್ನು ಬಳಸಬಹುದು. ಪೇಪರ್‌ನಿಂದಲೇ ಮಾಡಿದ ಬ್ಯಾಗ್, ಬಾಕ್ಸ್‌ಗಳು ಪ್ಲಾಸ್ಟಿಕ್ ಕವರ್ ಬಳಸುವುದನ್ನು ಬಿಟ್ಟು ಪರ್ಯಾಯ ವ್ಯವಸ್ಥೆ ಮಾಡಿಕೊಂಡಂತೆಯೇ.

ಮನೆಯಲ್ಲೇ ಪೇಪರ್, ಬ್ಯಾಗ್, ಕವರ್‌ಗಳನ್ನು ಮಾಡಬಹುದು. ಸಂಕ್ರಾಂತಿಯಂತಹ ಹಬ್ಬಗಳಲ್ಲಿ ಎಳ್ಳು ಬೆಲ್ಲ ಪೊಟ್ಟಣ ಕಟ್ಟಿಕೊಡಲು ಕೂಡ ಇಂಥ ಕವರ್‌ಗಳು ಸಹಕಾರಿ.

ಸಂಕ್ರಾಂತಿಗೆ ಬೆಲ್ಲ, ಕೊಬ್ಬರಿ ಸಣ್ಣದಾಗಿ ಹೆಚ್ಚಿ ಎಳ್ಳು, ಶೇಂಗಾ ಬೀಜವನ್ನು ಹದವಾಗಿ ಹುರಿದು ಬೆರೆಸುವುದು ಒಂದು ಕಲೆಯೇ. ಇದರ ಜೊತೆ ಸಕ್ಕರೆ ಅಚ್ಚು, ಬಾಳೆಹಣ್ಣು, ಕಬ್ಬು ಬುಟ್ಟಿಯಲ್ಲಿ ಇಟ್ಟು ಮನೆ ಮನೆಗೂ ಹಂಚುವ ಸಂಪ್ರದಾಯವಿದೆ. ಈಗೆಲ್ಲ ಪ್ಲಾಸ್ಟಿಕ್ ಕವರ್ ಬಳಸುವ ಬದಲು ಪೇಪರ್ ಕವರ್ ಬಳಸುವುದೇ ಲೇಸು. ಪ್ರಕ್ರತಿಯಲ್ಲಿ ದೊರಕುವ ಸಂಪತ್ತು, ವಿಶೇಷ ಗಳನ್ನು ಉಪಯೋಗಿಸಿಕೊಂಡು ನಮ್ಮ ಬದುಕನ್ನು ಸೂಕ್ತ ರೀತಿಯಲ್ಲಿ ತಿದ್ದಿಕೊಳ್ಳುವುದೇ ಹಬ್ಬಗಳ ಪರಮಾರ್ಥ.

ನಮ್ಮ ಅನುಕೂಲಕ್ಕೆ ಪ್ರಕೃತಿಯನ್ನು ಹೇಗೆ ಉಪಯೋಗಿಸಿಕೊಳ್ಳುತ್ತೇವೆಯೊ ಹಾಗೆ ಪ್ರಕೃತಿ, ಪರಿಸರವನ್ನು ಕಾಪಾಡುವುದು ನಮ್ಮ ಕರ್ತವ್ಯ.

## ಪೇಪರ್ ಬಾಕ್ಸ್ ಮಾಡೋದು ಹೇಗೆ?

ಚಿತ್ರದಲ್ಲಿ ತೋರಿಸಿರುವಂತೆ 8 ಚಚ್ಚೌಕದ ಡ್ರಾಯಿಂಗ್ ಶೀಟ್ ತೆಗೆದುಕೊಂಡು ಎದುರಿನ ಮೂಲೆಯನ್ನು ಸೇರಿಸಿ ಕೇಂದ್ರ ಬಿಂದುವನ್ನು ಗುರುತಿಸಿ. ಮೂಲೆ 1ನ್ನು ಕೇಂದ್ರ ಬಿಂದುವಿನ ಮೆಲೆ ಇಟ್ಟು ಕಾಗದವನ್ನು ಮಡಿಸುವ ಮೂಲಕ ಗೆರೆಯನ್ನು ಮೂಡಿಸಿ. ಅದೇ ರೀತಿ ಉಳಿದ ಮೂಲೆಗಳನ್ನು ಕೇಂದ್ರ ಬಿಂದುಗೆ ಸೇರಿಸಿ ಗೆರೆಗಳನ್ನು ಮೂಡಿಸಿ. ಈಗ ಇರುವ ಕಾಗದದ ಚಚ್ಚೌಕದ ಒಳಗೆ ಇನ್ನೊಂದು ಚಚ್ಚೌಕ ಮೂಡುತ್ತದೆ. ಅದೇ ರೀತಿ 1 ನ್ನು 3 , 4 ,5  ರಲ್ಲಿ ಇಟ್ಟು ಮಡಿಸಿ ಗೆರೆಗಳನ್ನು ಮೂಡಿಸಿ. ಎಲ್ಲಾ ಮೂಲೆಗಳಿಂದಲೂ ಇದೇ ರೀತಿ ಮಡಿಸಿ ಗೆರೆಗಳನ್ನು ಮೂಡಿಸಿ. ಉಳಿದ ಎರಡು ಮೂಲೆಯಲ್ಲೂ ಇದೇ ರೀತಿ ಮಡಿಸಿ ಗೆರೆಗಳನ್ನು ಮೂಡಿಸಿ.ಇದು ಫೋಟೋದಲ್ಲಿ ಕಾಣುವಂತೆ ನಾಲ್ಕು ಮೂಲೆಯಲ್ಲಿ ಚೆನ್ನಾಗಿ ಕಾಣುತ್ತದೆ.

ಕಾಗದವನ್ನು ಚುಕ್ಕಿಗಳಲ್ಲಿ ಗುರುತಿಸಿರುವಂತೆ ಕತ್ತರಿಸಿ ಇದನ್ನೆ ಉಳಿದ ಎರಡು ಮೂಲೆಗೂ ಅನ್ವಯಿಸಿ. ಗುರುತಿನಲ್ಲಿ ತೋರಿಸಿರುವಂತೆ ತುದಿಗಳನ್ನು ಕತ್ತರಿಸಿ ಅದರ ಎದುರು ಮೂಲೆಯಲ್ಲಿರುವಂತೆ ಮಧ್ಯ ಭಾಗದಲ್ಲಿ ಮಾತ್ರ ಕತ್ತರಿಸಿ.ಈಗ  8 ರ ಮೂಲೆಯನ್ನು ಮಧ್ಯದಲ್ಲಿ ಸೇರಿಸಿ ಲಾಕ್ ಮಾಡಿ. ಅದೇ ರೀತಿ ಇನ್ನೆರಡು ಮೂಲೆಯನ್ನು ಸೇರಿಸಿ ಮೂಡಿದ ಗೆರೆಗಳ ಪ್ರಕಾರ ಫೋಟೊ ದಲ್ಲಿರುವಂತೆ ಸೇರಿಸಿ ಅದರ ಮೇಲೆ ಅಲಂಕಾರಕ್ಕೆ ಕುಂದನ್ ಅಂಟಿಸಿ ಅಥವಾ ಚಿತ್ರ ಬಿಡಿಸುವುದರ ಮೂಲಕ, ಚಿತ್ರ ಅಂಟಿಸುವುದರ ಮೂಲಕ ಸಿಂಗರಿಸಿ. ಈಗ ನಿಮ್ಮ ಎಳ್ಳಿನ ಬಾಕ್ಸ್ ರೆಡಿ.

ಇದೇ ರೀತಿ ಬ್ಯಾಗ್‌ಗಳನ್ನೂ ಪೇಪರ್‌ನಲ್ಲೇ ಮಾಡಬಹುದು. ಪ್ಲಾಸ್ಟಿಕ್ ಕವರ್ ಬಳಕೆಯಿಂದ ಪರಿಸರಕ್ಕೆ ಹಾನಿ ಎಂಬುದಕ್ಕೆ ಇದು ಅಪವಾದ.

**■ ಚಿತ್ರಬರಹ: ವೀಣಾ ಶಂಕರ್**